ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಕೇಂದ್ರದಿಂದ ಜಿ. ಎಸ್. ಟಿ. ಪರಿಹಾರ ನೀಡದಿರುವುದರಿಂದ ಆಗುವ ಪರಿಣಾಮ

ಶ್ರೀ ಆರ್. ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) -

440 (564) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕೇಂದ್ರ ಸರ್ಕಾರ ರಾಜ್ಯಕ್ಕೆ ಜಿ. ಎಸ್. ಟಿ. ಪರಿಹಾರ ನೀಡದಿರುವುದರಿಂದ ರಾಜ್ಯ ಸರ್ಕಾರಕ್ಕೆ ಆಗುವ ಪರಿಣಾಮಗಳೇನು;

(ಆ) ಇದರಿಂದ ರಾಜ್ಯದ ಆರ್ಥಿಕ ಹೊಣೆಗಾರಿಕೆಯ ಮೇಲೆ ಪರಿಣಾಮ ಬೀರುವುದಿಲ್ಲವೇ; ಬೀರುವುದಾದರೆ ಯಾವ ಪ್ರಮಾಣದಲ್ಲಿ ಬೀರುತ್ತದೆ;

(ಇ) ಇದರಿಂದ ಶೇಕಡಾವಾರು ಎಷ್ಟು ಹಾನಿಯಾಗುತ್ತದೆ; ಈ ಆರ್ಥಿಕ ಬಿಕ್ಕಟ್ಟನ್ನು ಹೇಗೆ ನಿಭಾಯಿಸಲಾಗುತ್ತದೆ?